ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ
(Kristu Jayanti Kannada Sanshodhana Patrike)
ಸಂಪುಟ 1, ಸಂಚಿಕೆ 2, ಸೆಪ್ಟಂಬರ್ 2021, ಪುಟಗಳು 11 – 22

# ಕರ್ನಾಟಕದ ಅವಧೂತ ಪರಂಪರೆ: ಸಂಸ್ಕೃತಿ ಶೋಧದ ನೆಲಮೂಲ ನೆಲೆ

**ಡಾ. ಗೀತಾ ವಸಂತ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
geetavasant@gmail.com

## ಪ್ರಸ್ತಾವನೆ:

ಸಂಸ್ಕೃತಿ ಅಧ್ಯಯನದ ಸಂದರ್ಭದಲ್ಲಿ ಬಹು ಜನರು ಅಭ್ಯಸಿಸಿದ ಮುಖ್ಯಧಾರೆಯನ್ನೇ ಮತ್ತೆ ಮತ್ತೆ ಹಿಂಬಾಲಿಸಿ ಸಿದ್ಧಮಾದರಿಯ ಫಲಿತಗಳಿಗೆ ಬಂದು ತಲುಪುವುದು ಒಂದು ಬಗೆಯಾದರೆ, ಯಾರೂ ತುಳಿಯದ ದಾರಿಯಲ್ಲಿ ನಡೆದು ಕಿರುಧಾರೆಗಳನ್ನು ಗುರುತಿಸುತ್ತ ಹೊಸ ದರ್ಶನವನ್ನೇ ಕಟ್ಟಿಕೊಡುತ್ತ ನಡೆಯುವುದು ಇನ್ನೊಂದು ಬಗೆ. ಸಂಸ್ಕೃತಿಯ ಏಕರೂಪಿ ಮಾದರಿಯಿಂದ ಹೊರಬಂದು ನೆಲಮೂಲ ಸಂಸ್ಕೃತಿಯ ವೈವಿಧ್ಯತೆಯನ್ನು ಶೋಧಿಸುವುದು ಕನ್ನಡಸಂಸ್ಕೃತಿಶೋಧದ ಮುಂದಿರುವ ಸವಾಲು. ಸಂಸ್ಕೃತಿಯು ಬದುಕಿನ ಹೊರವಲಯವಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಮನುಷ್ಯನ ಒಳವಲಯದಿಂದ ಹೊರಟ ಭಾಷೆ, ಕಲೆ, ಸಾಹಿತ್ಯ, ಮೀಮಾಂಸೆ ಮುಂತಾದವುಗಳಿಗೂ ಸಂಬಂಧಿಸಿದುದಾಗಿದೆ. ಅಷ್ಟೇ ಅಲ್ಲ ಮನುಷ್ಯನ ಪ್ರಜ್ಞೆಯನ್ನೂ ಪ್ರಭಾವಿಸಿ ಆಂತರ್ಯವನ್ನೂ ಅದು ಪ್ರತಿನಿಧಿಸುತ್ತದೆ. ಆದರೆ, ಕರ್ನಾಟಕ ಸಂಸ್ಕೃತಿಯ ಬಗೆಗೆ ಹೇಳುವಾಗ ಸ್ಥೂಲವಾಗಿ ಇಲ್ಲಿ ಆಳಿಹೋದ ರಾಜಮನೆತನಗಳು, ಅವರು ಸ್ಥಾಪಿಸಿದ ಸಾಮ್ರಾಜ್ಯಗಳು, ಇಲ್ಲಿನ ಮತಸ್ಥಾಪಕರು, ಸಾಂಸ್ಥಿಕ ಧರ್ಮಗಳು ಹಾಗೂ ಅವುಗಳ ತಾತ್ವಿಕತೆ.. ಹೀಗೆ ಪ್ರಧಾನವಾಗಿ ಪ್ರಭುತ್ವ ಹಾಗೂ ಧರ್ಮದ ವಿಚಾರಗಳನ್ನೇ ಪ್ರಮುಖವಾಗಿ ಪರಿಗಣಿಸಲಾಗುತ್ತದೆ. ಕೃಷಿ–ವಾಣಿಜ್ಯ, ಕಲೆ–ಸಾಹಿತ್ಯ ಮುಂತಾದ ವಿವರಗಳು ವಿರಳವಾಗಿ ಗಣನೆಗೆ ಬಂದಿರುತ್ತವೆ. ಇವೆಲ್ಲವುಗಳ ಮಧ್ಯೆ ಎಷ್ಟೋ ಸಂಗತಿಗಳು ಲುಪ್ತವಾಗಿರುತ್ತವೆ. ಹೊರಪದರದಲ್ಲಿ ಗೋಚರವಾಗದೇ ಸುಪ್ತವಾಗಿರುತ್ತವೆ. ಹೀಗೆ ಅಲಕ್ಷ್ಯಕ್ಕೊಳಗಾದಂತೆ ತೋರಿದರೂ ಜನಮಾನಸವನ್ನು ಪ್ರಬಲವಾಗಿ ಪ್ರಭಾವಿಸುವ ಹಲವು ಸಂಗತಿಗಳಿವೆ. ಅದನ್ನೇ ಕಿರುಪರಂಪರೆಗಳೆಂದು ಗುರುತಿಸುತ್ತೇವೆ. ಅವಧೂತ ಮತ್ತು ಸಿದ್ಧ ಪರಂಪರೆಗಳು ಕೂಡ ಈ ಕಿರುಧಾರೆಗಳಲ್ಲಿ ಪ್ರಮುಖವಾದವುಗಳಾಗಿವೆ.

**ಸಂಸ್ಕೃತಿ ಅಧ್ಯಯನದಲ್ಲಿ ಅಲಕ್ಷಿತಧಾರೆಗಳ ಶೋಧದ ಪ್ರಸ್ತುತತೆ:**

ವೇದ ಪ್ರಧಾನವಾದ ಮುಖ್ಯಪರಂಪರೆಯ ಪ್ರವಾಹದಿಂದ ಭಿನ್ನವಾಗಿ ಹರಿದ ಅಲಕ್ಷಿತ ಪರಂಪರೆ ಅಥವಾ ಕಿರುಪರಂಪರೆಗಳಲ್ಲಿ ಒಂದು ಅವಧೂತ ಮತ್ತು ಸಿದ್ಧ ಪರಂಪರೆ. ವೇದದಲ್ಲಿನ ಕರ್ಮಾಚರಣೆಗಳು, ವರ್ಣಾಶ್ರಮದಂತಹ ವ್ಯವಸ್ಥೆಯನ್ನು ನಿರಾಕರಿಸುತ್ತ ಬೆಳೆದ ಈ ಪಂಥ ಜನಸಾಮಾನ್ಯರ ಬದುಕಿನಲ್ಲಿ ತನ್ನ ಬೇರುಗಳನ್ನು ನೆಟ್ಟಿದೆ. ಜಾತಿ, ಮತ, ಧರ್ಮಗಳ ಕೃತಕ ಚೌಕಟ್ಟು ಇಲ್ಲಿ ಸಡಿಲಗೊಂಡು ಬಿದ್ದುಹೋಗಿರುವುದರಿಂದ ಎಲ್ಲರಿಗೂ ಮುಕ್ತವಾದ ಬಯಲು ಸಿಗುವುದು ಇಲ್ಲಿ ಸಾಧ್ಯವಾಗಿದೆ. ಧರ್ಮ–ಶಾಸ್ತ್ರಗಳ ಹಂಗಿಲ್ಲದೇ ವಿಶ್ವಚೈತನ್ಯದೊಟ್ಟಿಗೆ ನಡೆಸಿದ ಈ ನೇರ ಅನುಸಂಧಾನ ಅಧ್ಯಯನಯೋಗ್ಯವಾದುದು. ಸಾಂಸ್ಥಿಕ ಧರ್ಮದ ಕಟ್ಟುಪಾಡುಗಳಲ್ಲಿ ಬಂಧಿಯಾಗದ ಈ ಜ್ಞಾನ ಕ್ರಮ ಸಂಸ್ಕೃತಿ ಚರಿತ್ರೆಯಲ್ಲಿ ದಾಖಲಾಗದೇ ಉಳಿದಿದೆ. ಸಿದ್ಧಪಂಥ, ನಾಥಪಂಥ, ಅವಧೂತಪಂಥ ಹೀಗೆ ನಾನಾ ಹೆಸರುಗಳಲ್ಲಿ ಹರಡಿರುವ ಈ ಸಾಧನಾಪಂಥಗಳು ಯೋಗ–ತಂತ್ರಗಳ ರಹಸ್ಯ ಜ್ಞಾನಗರ್ಭವಾಗಿದೆ. ಭಾರತದಾದ್ಯಂತ ಅನೇಕ ಕವಲುಗಳಲ್ಲಿ ಹರಡಿಕೊಂಡ ಈ ಪರಂಪರೆಯ ಶೋಧ ಹಾಗೂ ಅರ್ಥೈಸುವಿಕೆ ಇಂದು ನಡೆಯಬೇಕಾಗಿದೆ. ದೇಹ, ಮನಸ್ಸು, ಚಿತ್ತ, ಪ್ರಜ್ಞೆಯ ಆಳಗಳನ್ನು ಶೋಧಿಸುತ್ತ ಅದನ್ನು ಬ್ರಹ್ಮಾಂಡದ ವ್ಯಾಪ್ತಿಯೊಡನೆ ಸಮರಸಗೊಳಿಸುವ ಈ ವಿಶಿಷ್ಟ ಅರಿವಿನ ಸಂಕಥನವನ್ನು ಕಟ್ಟಿಕೊಳ್ಳುವುದು ನಮ್ಮ ಮುಂದಿರುವ ಸವಾಲು. ಪ್ರಯೋಗಶೀಲತೆಯಲ್ಲಿ ಹಾಗೂ ಮನುಷ್ಯ ಚೈತನ್ಯದಲ್ಲಿ ಅಪಾರ ವಿಶ್ವಾಸವನ್ನಿಟ್ಟು ಅವಧೂತ ಮತ್ತು ಸಿದ್ಧ ಪರಂಪರೆಗಳು ಧಾರ್ಮಿಕ ಕರ್ಮಠತೆಯಿಂದ ಉಸಿರುಗಟ್ಟಿಸಿಕೊಂಡು ಬದುಕುತ್ತಿರುವ ವರ್ಣಾಶ್ರಮ ವಿರೋಧಿಗಳಿಗೆ ಮುಕ್ತ ಆಧ್ಯಾತ್ಮಿಕ ಕಿಟಕಿಗಳಾಗಿ ತೆರೆದುಕೊಂಡವು. ಹೀಗೆ ಪರ್ಯಾಯ ಸಂಸ್ಕೃತಿ ಶೋಧದ ದೃಷ್ಟಿಯಿಂದ ಇಂತಹ ಅಧ್ಯಯನಗಳು ಮುಖ್ಯ.

ಕರ್ನಾಟಕದ ಸಾಮಾಜಿಕ, ಧಾರ್ಮಿಕ, ರಾಜಕೀಯ ಬದುಕಿನಲ್ಲಿ ನಾಥ, ಕಾಳಾಮುಖ, ಶಾಕ್ತ, ಕೌಳ, ಸೂಫಿ, ವಜ್ರಯಾನ, ಕಾಪಾಲಿಕ ಮುಂತಾದ ಪಂಥಗಳುಆಳವಾದ ಪ್ರಭಾವ ಬೀರಿವೆ. ಅಖಿಲಭಾರತ ಮಟ್ಟದಲ್ಲಿ ಈ ಪಂಥಗಳ ಅಧ್ಯಯನ ನಡೆದಿದೆಯಾದರೂ ಅಲ್ಲಿ ಕರ್ನಾಟಕದ ಉಲ್ಲೇಖವಾಗಿರುವುದು ತುಂಬ ಕಡಿಮೆ. ಇಲ್ಲಿರುವ ಮಠಗಳು, ಜೋಗಿ, ಸಿದ್ಧ, ಭೈರವರ ಹೆಸರಿನಲ್ಲಿ ನಾಡಿನಾದ್ಯಂತ ಇರುವ ಊರುಗಳು, ಗವಿ, ಬೆಟ್ಟ, ಕಣಿವೆ, ಗುಡಿ, ಸಮಾಧಿ, ಶಿಲ್ಪ, ಶಾಸನಗಳು... ಈ ಅವ್ಯಕ್ತ ಜಗತ್ತನ್ನು ವ್ಯಕ್ತಗೊಳಿಸುವಂಥ ಆಧಾರಗಳಾಗುತ್ತವೆ. ಈ ದಿಶೆಯಲ್ಲಿ ನಡೆಸುವ ಶೋಧವು ಹೊಸ ಸಾಂಸ್ಕೃತಿಕ ಇತಿಹಾಸವನ್ನೇ ನಿರ್ಮಿಸುವಲ್ಲಿ ಸಂಶಯವಿಲ್ಲ. ನಾಥರು ನೆನೆಯುವ ಚೌರಾಸಿ ಸಿದ್ಧರಲ್ಲಿ ಕಣ್ಣಪಾ, ಅಲ್ಲಮ ಹಾಗೂ ರೇವಣಸಿದ್ಧ ಮುಂತಾದವರು ಕನ್ನಡಿಗರು. ಕನ್ನಡದ ಪ್ರಾಚೀನ ಪತ್ತಯಗಳಲ್ಲಿ ಅಲ್ಲಮಪ್ರಭು, ರೇವಣಸಿದ್ಧ, ಮರುಳಸಿದ್ಧ, ಶಂಕರ ದಾಸಿಮಯ್ಯ, ತೋಂಟದ ಸಿದ್ಧಲಿಂಗಯತಿ ಮುಂತಾದವರು

ನಾಥರನ್ನು ಮುಖಾಮುಖಿಯಾಗುವ ಕಥನಗಳಿವೆ. ಕರ್ನಾಟಕದ ಈ ಭಿನ್ನ ಪಂಥ ಹಾಗೂ ವಿಚಾರಧಾರೆಗಳ ನಡುವೆ ಸಂಘರ್ಷ ಹಾಗೂ ಸ್ವೀಕಾರದ ವಿಶೇಷ ಸಾಂಸ್ಕೃತಿಕ ಸಂದರ್ಭಗಳನ್ನು ಶೋಧಿಸಿದರೆ ಕರ್ನಾಟಕ ಸಂಸ್ಕೃತಿಯ ವೈಚಾರಿಕ ಭಿತ್ತಿಯು ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಇಂಥ ಲುಪ್ತವಾದ ಕಥನಗಳನ್ನು ಹುಡುಕುವ ಮೂಲಕ ಭಿನ್ನ ದಾರ್ಶನಿಕ ಸಂಕಥನವನ್ನು ಕಟ್ಟುವುದು ಸಾಧ್ಯವಿದೆ.

ಯೋಗಿ, ಸಿದ್ಧ, ನಾಥ, ಅವಧೂತ ಹೀಗೆ ಹಲವು ಹೆಸರುಗಳಿಂದ, ಹಲವು ರೂಪಗಳಿಂದ ಕಾಣಿಸಿಕೊಂಡ ಆಧ್ಯಾತ್ಮಿಕ ಸಾಧನಾ ಪರಂಪರೆಯು ಭಾರತದ ದೇಸೀ ಬದುಕಿನ ಒಳಸ್ರೋತವಾಗಿದೆ. ತಾತ್ವಿಕತೆಗಿಂತ ಪ್ರಯೋಗಶೀಲತೆಯೇ ಪ್ರಧಾನವಾದ ಈ ಪರಂಪರೆಗೆ ತಂತ್ರ ಹಾಗೂ ಯೋಗಮಾರ್ಗಗಳೊಂದಿಗೆ ಹೊಕ್ಕಳಬಳ್ಳಿಯ ಸಂಬಂಧವಿದೆ. ಗುಪ್ತಸಾಧನೆಯ ಮೂಲಕ ಅನೇಕ ಸಿದ್ಧಿಗಳನ್ನು ಪಡೆದುಕೊಂಡ ಈ ಸಾಧಕರು 'ಸಿದ್ಧರೆನಿಸಿಕೊಂಡಿದ್ದಾರೆ'. ಅಂತೆಯೇ ಗೋರಖನಾಥನ ಅನುಯಾಯಿಗಳನ್ನೂ 'ನಾಥ' ಪಂಥದವರೆಂದು ಹೆಸರಿಸಲಾಗಿದೆ. 'ನಾಥ' ಎಂದರೆ ಗುರು. ಅಂದರೆ ಗುರುಪರಂಪರೆಯನ್ನು ಅನುಸರಿಸುವವರು. ಇವರನ್ನು ಗೋರಖನಾಥಿ ದರ್ಶನಿ, ಕಾನ್ ಫಟಾ, ಯೋಗಿ, ಅವಧೂತರು ಮೊದಲಾದ ಹೆಸರಿನಿಂದ ಗುರುತಿಸುವರು. ಸ್ತ್ರೀಯರನ್ನು ಯೋಗಿನಿ, ನಾಥನಿ ಎಂದು ಹೇಳಿದೆ. ಇದಕ್ಕೆ ಸಿದ್ಧಮತ, ಸಿದ್ಧಮಾರ್ಗ, ಯೋಗಮಾರ್ಗ, ಅವಧೂತ ಸಂಪ್ರದಾಯ ಎಂಬ ಹೆಸರುಗಳು ಬಳಕೆಯಲ್ಲಿವೆ. ಸಮಾಜದ ಮುಖ್ಯವಾಹಿನಿಯಿಂದ ಹೊರತಾಗಿ ಗಿರಿಕಂದರಗಳಲ್ಲಿ ಸಾಧನೆಗೈದು ಮರೆಯಾದ ಎಷ್ಟೋ ಅಜ್ಞಾತ ಅವಧೂತರು ಕರ್ನಾಟಕವನ್ನೊಳಗೊಂಡಂತೆ ಇಡೀ ಭಾರತದಲ್ಲಿ ಆಗಿಹೋಗಿದ್ದಾರೆ. ಸಾಂಸ್ಕೃತಿಕ ಇತಿಹಾಸಕಾರರ ದೃಷ್ಟಿಯಲ್ಲಿ ಇವರು ಗೌಣವಾಗಿ ಕಾಣಿಸಿದ್ದು ಮಾತ್ರ ವಿಪರ್ಯಾಸ. ಭಾರತದ ಯಾವುದೇ ಅನುಭಾವೀ ಪಂಥವು ತನ್ನ ಘೋಷಿತ ತಾತ್ವಿಕತೆಯಂತೆ ಬದುಕಿಲ್ಲ. ಎಲ್ಲ ದೈವ–ಆಚರಣೆಗಳ ಸಂಕರಸ್ಥಿತಿ ಅಲ್ಲಿ ಏರ್ಪಟ್ಟಿದೆ. ಇದು ದೇಸೀ ಸಂಸ್ಕೃತಿಗಳ ಸಂಕರವಾಗಿದೆ. ಟಿಬೆಟ್, ನೇಪಾಳಗಳಿಂದ ಹಿಡಿದು ದಕ್ಷಿಣ ಕೇರಳದವರೆಗೆ ವ್ಯಾಪಿಸಿಕೊಂಡ ನಾಥಪಂಥವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ನಾಥಪಂಥದಿಂದ ಮಹಾನುಭಾವ, ವಾರಕರಿ, ದತ್ತ ಮುಂತಾದ ಪಂಥಗಳು ಟಿಸಿಲೊಡೆದದ್ದನ್ನು ಗಮನಿಸಬಹುದು. ಉತ್ತರದಲ್ಲಿ ಕಬೀರಪಂಥ ಕೂಡ ನಾಥಪಂಥದ ಅನುಸಂಧಾನದಿಂದಲೇ ಬೆಳೆಯಿತು. ಸೂಫಿ ಹಾಗೂ ನಾಥಪಂಥಗಳಿಗೆ ಗಾಢತಾತ್ವಿಕ ಸಂಬಂಧವಿತ್ತು. ನಾಥಪಂಥದಲ್ಲಿ ಮುಸ್ಲಿಂ ಜೋಗಿಗಳೂ ಇದ್ದರು. ಸಂತ ಕಬೀರ ಹಾಗೂ ಕರ್ನಾಟಕದ ಶಿಶುನಾಳ ಷರೀಫರನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಸೂಫಿ–ನಾಥ ಸಂಬಂಧದ ದೃಷ್ಟಿಯಿಂದ ಕರ್ನಾಟಕದ ಬಾಬಾಬುಡನ್ ಗಿರಿ ಕೂಡ ಮಹತ್ವದ್ದು. ಹೀಗೆ ಭಾರತದಾದ್ಯಂತ ಹರಡಿರುವ ಈ ಬಹುರೂಪಿ ಪಂಥಗಳ ವೈವಿಧ್ಯತೆ ಹಾಗೂ ಅಂತಃಸಂಬಂಧ, ಕೊಡುಕೊಳೆಗಳು ಅಧ್ಯಯನಯೋಗ್ಯವಾದುದಾಗಿವೆ.

ಸಂಪುಟ 1, ಸಂಚಿಕೆ 2, ಸೆಪ್ಟಂಬರ್ 2021, ಪುಟಗಳು 11 – 22

**ಹೊಸ ಭಾಷೆಯ ನಿರ್ಮಾಣ**

ಯೌಗಿಕ ಹಾಗೂ ತಾಂತ್ರಿಕ ಸಾಧನೆಗಳ ಪರಿಭಾಷೆಯನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಹೊರಟಾಗ ಹೊಸಬಗೆಯ ಭಾಷೆಯನ್ನೇ ರೂಪಿಸಿಕೊಳ್ಳುವ ಅನಿವಾರ್ಯತೆ ಸಾಧಕರಿಗೆದುರಾಯಿತು. ಸಮಾಜದ ಮುಖ್ಯವಾಹಿನಿಯು ತಮ್ಮನ್ನು ಶಂಕೆಯಿಂದ ನೋಡುವಾಗ, ಅಥವಾ ತುಳಿಯಲು ಪ್ರಯತ್ನಿಸಿದಾಗ, ಎಷ್ಟು ಹೇಳಬೇಕು, ಹೇಗೆ ಹೇಳಬೇಕು ಎಂಬುದು ಮುಖ್ಯವಾಯಿತು. ಅರ್ಥಕ್ಕೆ ನಿಲುಕದೇ, ಬರೀ ಅನುಭೂತಿಗೆ ನಿಲುಕುವ ಸಂಗತಿಗಳನ್ನು ಅಭಿವ್ಯಕ್ತಿಸಲು ಪರ್ಯಾಯ ಜಾಡನ್ನು ಹಿಡಿಯಬೇಕಾಯಿತು. ನೇರವಾಗಿ ಅಭಿವ್ಯಕ್ತಿಸಲಾಗದ ನಿಗೂಢ ಪರಿಭಾಷೆಯನ್ನು 'ಸಂದಾಭಾಷೆ' ಎನ್ನುತ್ತಾರೆ. ಬೌದ್ಧರು ಈ ರಹಸ್ಯಮಯ ಪ್ರತೀಕಾತ್ಮಕ ಶೈಲಿಯನ್ನು ' ಸಂದಾಭಾಷಾ' ಅಥವಾ ' ಸಂದಾವಚನ' ಎಂದಿದ್ದಾರೆ. ಋಗ್ವೇದ, ಅಥರ್ವಣ ವೇದಗಳಲ್ಲೇ ಕಾಣಬರುವ ಈ ಪ್ರತಿಮಾತ್ಮಕ ಶೈಲಿಗೆ ದೀರ್ಘ ಇತಿಹಾಸವಿದೆ.

ಅವಧೂತ ಪಂಥಗಳು ತಮ್ಮ ಅಭಿವ್ಯಕ್ತಿಗೆ ಲೋಕಭಾಷೆ ಅಥವಾ ದೇಶಭಾಷೆಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದು ಇನ್ನೊಂದು ಮಹತ್ವದ ಅಂಶ. ಗ್ರಂಥಸ್ಥಜ್ಞಾನದ ಭಾರವನ್ನು ಕೆಳಗಿರಿಸಿ ಅರಿವಿನ ಅಖಂಡತೆಯನ್ನು ವಿಸ್ತರಿಸಲು ಇವರು ಭಾಷೆಯ ಮಿತಿಗಳನ್ನೇ ಹಿಗ್ಗಿಸಿಕೊಂಡರು. ನೆಲದ ಭಾಷೆಯ ಆಕರಗಳನ್ನೇ ಬಳಸಿಕೊಂಡು ದೇಸೀ ತತ್ವಜ್ಞಾನದ ಹೊಸಮಾದರಿಯೊಂದು ರೂಪುಗೊಳ್ಳತೊಡಗಿತು. ಕನ್ನಡದಲ್ಲಿ ' ಸಪ್ತಕಾವ್ಯ'ದ ಗುರುಬಸವ, ' ಜ್ಞಾನಸಿಂಧು'ವಿನಂತಹ ಹಲವು ಕೃತಿಗಳನ್ನು ರಚಿಸಿದ ಚಿದಾನಂದಾವಧೂತ, ಕಾಳಘಟ್ಟದ ರುದ್ರಾನಂದಾವಧೂತ, ಶಿವರಾಮಾವಧೂತ ಮೊದಲಾದವರನ್ನು ಹೆಸರಿಸಬಹುದು. ಅಲ್ಲಮಪ್ರಭುವಿನ ಅಭಿವ್ಯಕ್ತಿಯಲ್ಲಂತೂ ಇಂಥ ಬೆಡಗಿನ ಭಾಷೆ (ಸಂದಾಭಾಷೆ) ಗಾಢವಾಗಿ ಮೂಡಿದೆ. ಮುಂದೆ ಕನ್ನಡದ ತತ್ವಪದಕಾರರಲ್ಲಿ ಈ ಲೋಕಭಾಷೆಯ ಬನಿ, ಪ್ರತಿಮೆಗಳ ದಟ್ಟತೆ ಅಪರೂಪದ ಅನುಭವ ನೀಡುತ್ತವೆ. ಆಧುನಿಕ ಸಾಹಿತ್ಯಕ್ಕೆ ಬಂದರೆ ದ.ರಾ.ಬೇಂದ್ರೆ, ಎಚ್.ಎಸ್.ಶಿವಪ್ರಕಾಶ್‌ರಂತಹವರ ಕಾವ್ಯದಲ್ಲಿ ಇದು ಮತ್ತೊಮ್ಮೆ ಗರಿಗೆದರಿದೆ.

**ಅವಧೂತ ಸ್ಥಿತಿ ಎಂದರೇನು**

'ಅವಧೂತ' ಎನ್ನುವುದು ವ್ಯಕ್ತಿವಾಚಕವಾಗಿ ಬಳಕೆಗೊಳ್ಳುತ್ತಿದ್ದರೂ ಅದೊಂದು ಸ್ಥಿತಿ. ಮನುಷ್ಯಪ್ರಜ್ಞೆಯು ತಲುಪಬಹುದಾದ ಅತ್ಯಂತ ಉನ್ನತ ನೆಲೆಯದು. ಸಾಧಕನು 'ಸಿದ್ಧ'ನಾಗಿ ಪಕ್ವಗೊಂಡ ಸ್ಥಿತಿಯದು. ಆ ಸ್ಥಿತಿಯನ್ನು ವಿವರಿಸಲು ಯೋಗ–ತಂತ್ರಗಳ ಸಾಧನಾ ಪರಿಭಾಷೆಯನ್ನು ಅವಲಂಬಿಸುವುದು ಅನಿವಾರ್ಯ. ಪರಿಚಿತ ಭಾಷೆಯ ಮೂಲಕ ಅರಿಯುವುದಕ್ಕೆ ಅದರ ಸ್ಥಾಪಿತವಾದ

ಅರ್ಥದ ಚೌಕಟ್ಟೇ ಒಂದು ಮಿತಿಯಾಗಿಬಿಡುತ್ತದೆ. ಅನುಭವದ ಸಂಕೀರ್ಣತೆ ಹಾಗೂ ಬಹುಮುಖತ್ವವನ್ನು ಅಭಿವ್ಯಕ್ತಿಸಲು ಭಾಷೆಯು ರೂಪಾಂತರಗೊಳ್ಳುವುದು ಅಗತ್ಯವಾಗುತ್ತದೆ. ಆದ್ದರಿಂದ 'ಅವಧೂತ' ಪದವನ್ನು ಒಂದು ಬಗೆಯ 'ಪ್ರಜ್ಞಾ ವಿಶೇಷ'ವಾಗಿ ಅರಿಯುವಲ್ಲಿ ಹಲವು ತೊಡಕುಗಳಿವೆ.

ವಿಲಕ್ಷಣತೆಯೇ ಅವಧೂತರ ಗುರುತಾಗಿರುವುದರಿಂದ ಅವರನ್ನು 'ಲಕ್ಷಣ'ಗಳ ಪಟ್ಟಿಯಲ್ಲಿ ಹಿಡಿದಿಡುವುದು ಅಸಾಧ್ಯ. ಏಕರೂಪತೆಯ ಬೆನ್ನುಬಿದ್ದಿರುವ ಅಧ್ಯಯನ ಮಾದರಿಗಳಿಂದಲೂ ಅವಧೂತರ ಬದುಕನ್ನು ಪರಿಭಾವಿಸುವುದು ಸೂಕ್ತವೆನಿಸುವುದಿಲ್ಲ. ವ್ಯಕ್ತಿಚೈತನ್ಯದಲ್ಲಿ, ಆತ್ಮಸಾಧನೆಯಲ್ಲಿ ನಂಬಿಕೆಯಿರಿಸಿದ ಈ ಮಾರ್ಗವಲ್ಲದ ಮಾರ್ಗವು 'ದರ್ಶನ'ವಾಗಿ ತತ್ವಶಾಸ್ತ್ರೀಯ ತಿಳುವಳಿಕೆಗೆ ಒಳಪಡದಿರಲು ಇದೇ ಕಾರಣ. ಬದುಕಿನ ಸ್ಥಾಪಿತ ಕ್ರಮಗಳನ್ನು ತಳ್ಳಿಹಾಕಿ, ರೂಢಿಗತ ಆಚಾರ, ವಿಚಾರ, ಸಂಪ್ರದಾಯಗಳ ಚೌಕಟ್ಟಿಗೆ ಒಳಪಡದೇ ಬದುಕಿದ ಅವಧೂತರು ಸಿದ್ಧನೋಟದ ಕ್ರಮಕ್ಕೆ ವಿಸ್ಮಯವಾಗಿ ತೋರುವುದು ಸಹಜ. ವೈಯಕ್ತಿಕ ಸಾಧನಾ ನೆಲೆಯ ಹಿನ್ನೆಲೆಯಿಂದ ಬಂದಿರುವ ಅವಧೂತರು ಒಂದು ಪಂಥವಾಗಿ, ಪರಂಪರೆಯಾಗಿ ಜನಮಾನಸವನ್ನು ಪ್ರಭಾವಿಸಲು ಕಾರಣ ಅವರು ನಡೆದ ಗುರುಮಾರ್ಗವೇ ಆಗಿದೆ. ಗುರುವಿನಿಂದ ದೀಕ್ಷಾಬದ್ಧನಾದ ಶಿಷ್ಯನು ಸಾಧನೆಯ ರಹಸ್ಯಮಯತೆಯನ್ನು ಅರಿಯುತ್ತಾನೆ ಹಾಗೂ ಅದನ್ನು ಹಾಗೆಯೇ ಮುಂದೆ ದಾಟಿಸುತ್ತಾನೆ. ದೇಸೀಜ್ಞಾನದ ರಹಸ್ಯಗರ್ಭವಾದ ಅವಧೂತ ಪರಂಪರೆಯು ಸ್ಥಳೀಯ ಪರಂಪರೆಯಾಗಿ, ಸಂಸ್ಕೃತಿಯ ಭಾಗವಾಗಿ ಬೆಳೆದು ಬಂದ ರೀತಿಯೇ ಅತ್ಯಂತ ಕುತೂಹಲಕರವಾಗಿದೆ.

ಮಧ್ಯಯುಗದ ಪ್ರಬಲ ಆಧ್ಯಾತ್ಮಿಕ ಶಕ್ತಿಯಾಗಿ ಬೆಳೆದ ಅವಧೂತ ಸಂಪ್ರದಾಯಗಳು ಕೆಳವರ್ಗದ ಬದುಕನ್ನು ಗಾಢವಾಗಿ ಪ್ರಭಾವಿಸಿದವು. ಅವಧೂತತ್ವದಲ್ಲಿರುವ ಮುಕ್ತತೆ, ನಿರಾಳತೆಗಳು ಕ್ರಾಂತಿಕಾರಕವಾಗಿ ತೋರಿದ್ದರಲ್ಲಿ ಆಶ್ಚರ್ಯವಿಲ್ಲ. ವ್ಯವಸ್ಥೆಯ ಕಪಿಮುಷ್ಟಿಗೆ ಸಿಲುಕಿ ನರಳಿದ ಅನೇಕರಿಗೆ ಇದು ಮುಕ್ತ ಆಧ್ಯಾತ್ಮದ ಕಿಟಕಿಯಾಗಿ ತೆರೆದುಕೊಂಡಿತು. ವರ್ಣಾಶ್ರಮವನ್ನು ವಿರೋಧಿಸುವ ಅವಧೂತಪಂಥಗಳ ನಿಲುವು ಅವೈದಿಕ ಚಿಂತನಧಾರೆಗಳಿಂದ ಪ್ರೇರಿತವಾಗಿವೆ.

**ಅಕ್ಷರತ್ವಾದ್ವರೇಣ್ಯತ್ವಾದ್ಧೂತ ಸಂಸಾರ ಬಂಧನಾತ್**
**ತತ್ವಮಸ್ಯಾದಿಲಕ್ಷ್ಯತ್ವಾದವಧೂತ ಇತೀರ್ಯತೇ**
**ಯೋವಿಲಂಘ್ಯಾಶ್ರಮಾನ್ವರ್ಣಾನಾತ್ಮನ್ಯೇವ ಸ್ಥಿತಃ ಸದಾ**
**ಅತಿವರ್ಣಾಶ್ರಮೀಯೋಗೀ ಅವಧೂತಃ ಸ ಕತ್ಯಥೇ**

**(ಅವಧೂತೋಪನಿಷತ್)**

ಸಾಮಾಜಿಕವಾಗಿ ವರ್ಣಾಶ್ರಮ ವ್ಯವಸ್ಥೆಯ ವಿರುದ್ಧ ಸಿಡಿದು ನಿಂತ ವಿದ್ರೋಹಿಪಂಥವಾಗಿ ಕರ್ಮಾಚರಣೆಗಳನ್ನು, ಗ್ರಂಥಸ್ಥಜ್ಞಾನವನ್ನು ಮೀರಿನಿಂತ ಅನುಭೂತಿ ಮಾರ್ಗವಾಗಿ ಅವಧೂತ ಪರಂಪರೆಯು ಗೋಚರಿಸುತ್ತದೆ. ಅವಧೂತರು ವೈಯಕ್ತಿಕವಾಗಿ ಮಾನಸಿಕ ಉಪಾಧಿಗಳನ್ನು ಮೀರಿನಿಂತ ವಿರಾಗಿಗಳಾದರೆ, ಪಂಥವಾಗಿ ಸಾಮಾಜಿಕ ಪೂರ್ವಗ್ರಹಗಳನ್ನು ಮೀರಿನಿಂತ ಸಂತರು.

ತಂತ್ರ ಹಾಗೂ ಯೋಗಮಾರ್ಗಗಳು ಒಂದರಲ್ಲೊಂದು ಬೆರೆತು ಅನೇಕ ಪಂಥಗಳ ಹುಟ್ಟಿಗೆ ಕಾರಣವಾಗಿವೆ. 'ಅವಧೂತ' ಎಂಬ ನಿರ್ದಿಷ್ಟ ಲಕ್ಷಣಗಳ ಒಂದೇ ಪಂಥವಿಲ್ಲ. ಸಿದ್ಧ, ನಾಥ, ದತ್ತ, ಆರೂಢ, ಶಾಕ್ತ, ಕಾಪಾಲಿಕ, ಕೌಳ ಹೀಗೆ ಅನೇಕ ಪಂಥಗಳು ಐತಿಹಾಸಿಕ ಕಾಲಕ್ರಮದಲ್ಲಿ ಒಂದನ್ನೊಂದು ಪ್ರಭಾವಿಸುತ್ತ ಒಂದರೊಳಗೊಂದು ಬೆರೆಯುತ್ತ ಬಂದಿವೆ. ಯೋಗ–ತಂತ್ರಮೂಲದ ಸಾಧನಾ ಮಾರ್ಗಗಳನ್ನು 'ಅವಧೂತಮಾರ್ಗ' ಎನ್ನಬಹುದು. ಅವಧೂತ ಎಂಬ ಪದ ದತ್ತವಾಚಕವೂ ಆಗಿದೆ. ದತ್ತಾತ್ರೇಯನೊಂದಿಗಿನ ಅಂತಃಸಂಬಂಧದಿಂದ ನಾಥಪಂಥವೂ ಅವಧೂತಪಂಥವೆನಿಸಿದೆ. ಉತ್ತರಭಾರತದ ನಿರ್ಗುಣೀ ಸಂತ ಪರಂಪರೆಯಲ್ಲಿ ಸಾಧಕನನ್ನು 'ಅವಧೂ' ಎಂದು ಉಲ್ಲೇಖಿಸಲಾಗಿದೆ. ರಹಸ್ಯ ಸಾಧನೆಯಲ್ಲಿ ನಿರತವಾದ, ಗುರುಮಾರ್ಗಿಯಾದ ಪಂಥಗಳೆಲ್ಲ 'ಅವಧೂತ' ಎಂಬ ಹೆಸರಿನಲ್ಲಿ ಸಮಾವೇಶಗೊಂಡಿವೆ. 'ಹಳೆಯ ಚಿಂದಿಯಿಂದ ಮಾಡಿದ ಕಂತೆಯಿಂದ ದೇಹ ಮುಚ್ಚಿಕೊಂಡು, ಹಾಳು ದೇಗುಲಗಳಲ್ಲಿ, ಗಿರಿಕಂದರಗಳಲ್ಲಿ ವಾಸಮಾಡಿಕೊಂಡು ಇರುವ ಅವಧೂತನು ಗುರುಪಾದವನ್ನು ಪೂಜಿಸಿಕೊಂಡು ಸುಖವಾಗಿರುತ್ತಾನೆ ಎಂದು ಚರ್ಪಟನಾಥ ಹೇಳುತ್ತಾನೆ". (ಕರ್ನಾಟಕದ ನಾಥಪಂಥ, ರಹಮತ್ ತರೀಕೆರೆ, ಪು.೨೭) ಸೂಫಿ ಹಾಗೂ ನಾಥಪಂಥಗಳ ನಡುವೆಯೂ ಕೊಡುಕೊಳೆ ನಡೆದಿದೆ. ತಾಂತ್ರಿಕ ಪಂಥಗಳಾದ ಶಾಕ್ತ, ಕಾಪಾಲಿಕ, ಕೌಳ ಪಂಥಗಳ ಆಚರಣೆಗಳು ಒಂದರೊಳಗೊಂದು ಬೆರೆತು ವಿಚಿತ್ರವಾದ ಸಂಕರ ಸ್ಥಿತಿಯುಂಟಾಗಿದೆ. ಬೌದ್ಧ ತಾಂತ್ರಿಕಪಂಥವಾದ ವಜ್ರಯಾನದ ಪ್ರಭಾವ ಕೂಡ ಈ ಎಲ್ಲ ಸಾಧನಾ ಪರಂಪರೆಗಳ ಒಡಲಲ್ಲಿ ಬೆರೆತಿದೆ. ಜೈನಸಿದ್ಧರು, ಮುಸ್ಲಿಂ ಜೋಗಿಗಳು ಹೀಗೆ ಸಮಾಜದ ಎಲ್ಲ ಧರ್ಮ, ಜಾತಿಗಳಿಗೆ ಸೇರಿದ ಜನರು ಈ ಪರಂಪರೆಯಲ್ಲಿ ಸಮಾವೇಶಗೊಂಡಿರುವುದು ವಿಶೇಷವಾಗಿದೆ.

'ಅವಧೂತತ್ವ'ವು ಅಲೆಮಾರಿ ಸಂಸ್ಕೃತಿಯ ಕೂಸಾದರೆ, 'ಶರಣ'ತ್ವವು ಕೃಷಿ ಸಂಸ್ಕೃತಿ ಅಥವಾ 'ಕಾಯಕ' ಸಂಸ್ಕೃತಿಯ ಕೂಸು. ಆದ್ದರಿಂದ ಇಲ್ಲಿ ವ್ಯಕ್ತಿಗತ ಸಾಧನೆಗಿಂತ ಸಮಷ್ಟಿಹಿತ ಮುಖ್ಯವಾಯಿತು. 'ಇಹ'ದ ಬದುಕು ಮುಖ್ಯವಾಗಿ ಸಮಾಜಮುಖಿ ಚಿಂತನೆಗಳು ಬೆಳೆದವು. ಆದರೆ, ಶರಣರ ಅರಿವಿನ ಅಂತಃಸತ್ವದ ನಿರ್ಮಿತಿಯಲ್ಲಿ ಅವಧೂತ ಪರಂಪರೆಗಳ ಪಾಲು ಬಹುಮುಖ್ಯವಾದುದು. ಬಸವಣ್ಣನ 'ದೇಹವೇ ದೇಗುಲ'

ಎಂಬ ಕಲ್ಪನೆಯ ಹಿಂದೆ ತಾಂತ್ರಿಕ ಪಂಥಗಳ ದೇಹಕೇಂದ್ರಿತ ಸಾಧನೆಯ ಸೂಚನೆಯನ್ನು ಕಾಣಬಹುದು. ಕುಂಡಲಿನೀ ಶಕ್ತಿಯನ್ನು ಜಾಗೃತಗೊಳಿಸಿ ಷಟ್ಚಕ್ರಭೇದನದ ಮೂಲಕ ಸಹಸ್ರಾರದಲ್ಲಿ ಸಮರಸಗೊಳ್ಳುವ ಯೌಗಿಕಾನುಭೂತಿಯು ದೇಹದ ಮೂಲಕವೇ ಶಿವಾನುಭವವನ್ನು ಮಾಡಿಸುವಂತಹದು. ಅಲ್ಲಮ ಪ್ರತಿಪಾದಿಸುವ 'ಬಯಲು' ಇಲ್ಲಿ ಮಾನಸಿಕ ಉಪಾಧಿಗಳನ್ನು ಮೀರಿದ ಅವಧೂತನ ನಿರಂಜನ ಸ್ಥಿತಿಯನ್ನು ಸೂಚಿಸಿದರೆ, ಅಕ್ಕಮಹಾದೇವಿಯ 'ಬತ್ತಲು' ಎಲ್ಲ ಆವರಣಗಳನ್ನು ಕೊಡವಿನಿಂತ 'ದಿಗಂಬರತ್ವ'ದ ನಿಲುವೇ ಆಗಿದೆ. ಶ್ರೇಷ್ಠ–ಕನಿಷ್ಟವೆಂಬ ಕಲ್ಪನೆಯನ್ನೇ ಬುಡಮೇಲು ಮಾಡುವ ಅನೇಕ ವಚನಕಾರರ ಧೀರನಿಲುವು ಕೂಡ ಅವಧೂತಪಂಥಗಳ ವಿಚಾರಧಾರೆಯಿಂದ ಬೆಂಬಲಿತವಾಗಿರಬಹುದು.

ಸಾಧನಾ ಪರಂಪರೆಗಳಿಗೆಶೈವಮತವು ಹತ್ತಿರವೆನಿಸಲು ಕಾರಣ, ಅಲ್ಲಿರುವ ಶಿವ–ಶಕ್ತಿಯರ ಅಭೇದ ಕಲ್ಪನೆ. ಮೂಲಾಧಾರದಲ್ಲಿರುವ ಶಾಂಭವೀಶಕ್ತಿಯು ಷಟ್ಚಕ್ರ ಭೇದನದ ಮೂಲಕ ಸಹಸ್ರಾರದಲ್ಲಿರುವ ಶಿವನನ್ನು ಸೇರಿದಾಗ ಉಂಟಾಗುವ ಅಮೃತಾನುಭವ ಅಥವಾ ಸಮರಸೀಕರಣವು ಯೋಗದ ಪರಿಭಾಷೆಯಾಗಿದೆ. ತಂತ್ರದ 'ಮಹಾಸುಖ'ದ ಕಲ್ಪನೆಯಲ್ಲಿಯೂ ಇದೇ ಛಾಯೆಯನ್ನು ಕಾಣುತ್ತೇವೆ.

**ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ**
**ಹೂವಿಲ್ಲದ ಪರಿಮಳದ ಪೂಜೆ**
**ಹೃದಯಕಮಲದಲ್ಲಿ ಶಿವಶಿವಾ ಎಂಬ ಶಬ್ದ**
**ಇದು ಅದ್ವೈತ ಕಾಣಾ ಗುಹೇಶ್ವರ**

ಎಂಬಲ್ಲಿ ಈ ಅನುಭವಕ್ಕೆ ಶಿವನೇ ಸಂಜ್ಞೆಯಾಗಿದ್ದಾನೆ.

ಕರ್ನಾಟಕದ ವೀರಶೈವಕ್ಕೆ ಕಾಶ್ಮೀರ ಶೈವದ ಪ್ರೇರಣೆಯನ್ನು ಹಲವು ವಿದ್ವಾಂಸರು ಸೂಚಿಸುತ್ತಾರೆ. ವಿಶಿಷ್ಟಾದ್ವೈತವು ವೀರಶೈವಕ್ಕೆ ಮೂಲವೆಂಬ ಮಾತಿದೆ. "ಕಾಳಾಮುಖರು ವೀರಶೈವ ಹಾಗೂ ಕಾಶ್ಮೀರ ಶೈವರಿಗಿಂತ ಹಳಬರೆಂದು ಹೇಳಲಾಗುತ್ತದೆ. ಅವರು ಕರ್ನಾಟಕದ ಧಾರ್ಮಿಕ ಜೀವನದಲ್ಲಿ ಅತ್ಯಂತ ಗಣ್ಯಸ್ಥಾನವನ್ನು ಪಡೆದಿದ್ದು ಅನೇಕ ಘಟಿಕಾಸ್ಥಾನಗಳನ್ನು ನಡೆಸುತ್ತಿದ್ದರು. ವೀರಶೈವರು ಇವರಿಂದಲೇ 'ಲಿಂಗಧಾರಣೆ'ಯನ್ನು ಸ್ವೀಕರಿಸಿದರೆಂದು ಪ್ರೊ.ಕೆ.ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. (ಸಿದ್ಧಸಾಹಿತ್ಯ, ಮ.ಸು.ಕೃಷ್ಣಮೂರ್ತಿ, ಪು.೬೭)

ಲಿಂಗಾಯತ ಧರ್ಮವು ನಾಥಪಂಥದ ಪ್ರೇರಣೆಯಿಂದ ಹುಟ್ಟಿದ್ದಾಗಿ ಸಂಶೋಧಕರಾದ ಡಾ.ಎಂ.ಎಂ.ಕಲ್ಬುರ್ಗಿಯವರು ಅಭಿಪ್ರಾಯ ಪಡುತ್ತಾರೆ. ನಾಥಪಂಥದ 'ಹಠಯೋಗ ಪ್ರದೀಪಿಕೆ'

ಮೊದಲಾದ ಗ್ರಂಥಗಳಲ್ಲಿ ಅಲ್ಲಮಪ್ರಭುದೇವ, ರೇವಣನಾಥ (ಸಿದ್ಧ) ಮೊದಲಾದವರು ನಾಥಪಂಥದವರೆಂಬ ಉಲ್ಲೇಖವಿದೆ. ಅಲ್ಲಮಪ್ರಭುವಿಗೆ ಲಿಂಗದೀಕ್ಷೆ ನೀಡಿದವನು ಅನಿಮಿಷಯ್ಯ. ಅನಿಮಿಷ = ಮೀನ. ಆದ್ದರಿಂದ ಮತ್ಸ್ಯೇಂದ್ರನಾಥನೇ ಅನಿಮಿಷಯ್ಯನಾಗಿರಬಹುದೆಂದು ಅವಧೂತ ಪರಂಪರೆಯ ಕವಿ ಡಾ. ದ.ರಾ.ಬೇಂದ್ರೆಯವರು ಅಭಿಪ್ರಾಯಪಡುತ್ತಾರೆ. ಕರ್ನಾಟಕದ ಪಕ್ಕದ ಮಹಾರಾಷ್ಟ್ರದಲ್ಲಿ ವ್ಯಾಪಕವಾಗಿದ್ದ ನಾಥಪರಂಪರೆಯ ಪ್ರಭಾವ ಉತ್ತರಕರ್ನಾಟಕ ಭಾಗದಲ್ಲಿಯೂ ಉಂಟಾಗಿರುವ ಸಾಧ್ಯತೆ ಅಧಿಕವಾಗಿದೆ. ಮಹಾರಾಷ್ಟ್ರದ ಸಂಶೋಧಕ ಡಾ.ರಾ.ಚಿಂ.ಢೇರೆಯವರೂ ಸಹ ಅಲ್ಲಮಪ್ರಭುವನ್ನು ನಾಥಸಿದ್ಧನೆಂದೇ ಉಲ್ಲೇಖಿಸುತ್ತಾರೆ. “ಗೋರನ್ನಮಂತ್ರಿ ಎಂಬ ತೆಲಗು ಕವಿಯ ‘ನವನಾಥ ಚರಿತ್ರಮು’ ಎಂಬ ಗ್ರಂಥದಲ್ಲಿ ಅಲ್ಲಮಪ್ರಭುವಿನ ಚರಿತ್ರೆಯನ್ನು ವರ್ಣಿಸಲಾಗಿದೆ. ಪ್ರಸ್ತುತ ಗ್ರಂಥವವನ್ನು ಕ್ರಿ.ಶ.೧೪೧೦ರಲ್ಲಿ ರಚಿಸಲಾಗಿದೆ”. (ನಾಥಸಂಪ್ರದಾಯದ ಇತಿಹಾಸ, ರಾ.ಚಿಂ.ಢೇರೆ, ಪು.೨೦೧) ಅಲ್ಲಮಪ್ರಭುವಿನ ಚರಿತ್ರೆಯನ್ನು ಕಟ್ಟಿಕೊಡುವ ‘ಪ್ರಭುಲಿಂಗಲೀಲೆ’ ಕೃತಿಯಲ್ಲಿ ಅಲ್ಲಮ ಹಾಗೂ ಗೋರಖರ ವಾಗ್ವಾದವು ಬರುತ್ತದೆ. ‘ಪ್ರಭುದೇವರ ರಗಳೆ’, ‘ಶೂನ್ಯಸಂಪಾದನೆ’ ಕೃತಿಗಳಲ್ಲೂ ಈ ವಿವರಗಳು ದೊರೆಯುತ್ತವೆ. ಸ್ವತಃ ಅಲ್ಲಮಪ್ರಭುವು ತನ್ನ ವಚನಗಳಲ್ಲಿ ನವನಾಥರನ್ನು ಉಲ್ಲೇಖಿಸಿದ್ದಾನೆ. ಆದರೆ ಅಲ್ಲಮ ಹಾಗೂ ಅವನ ಸಮಕಾಲೀನ ಶರಣರ ಉಕ್ತಿಗಳಲ್ಲಿ ಅವಧೂತ ಪಂಥಗಳ ಕುರಿತು ಮಿಶ್ರ ಅಭಿಪ್ರಾಯಗಳಿವೆ. ಅವಧೂತ ಪರಂಪರೆಗೆ ಮುಖಾಮುಖಿಯಾದ ಶರಣಧರ್ಮವು ಸ್ವೀಕಾರ–ನಿರಾಕರಣೆಗಳ ದ್ವಂದ್ವವನ್ನು ಎದುರಿಸಿದೆ. ತಮ್ಮ ಶ್ರೇಷ್ಠತೆಯನ್ನು ಸ್ಥಾಪಿಸಬೇಕಾದ ಐತಿಹಾಸಿಕ ಅನಿವಾರ್ಯತೆಯಲ್ಲಿ ಅವರು ನಾಥ, ಕಾಪಾಲಿಕ ಆಚರಣೆಗಳನ್ನು ಕಟುವಾಗಿ ಟೀಕಿಸುವುದು ಕಂಡುಬರುತ್ತದೆ.

ಯೋಗಪ್ರಧಾನ ಧಾರೆಯಾದ ನಾಥಪಂಥದಲ್ಲಿಯೂ ತಾಂತ್ರಿಕ ಆಚರಣೆಗಳು ಕಾಲಕ್ರಮದಲ್ಲಿ ಬೆರೆಯುತ್ತ ಹೋಗಿವೆ. ಬಾಹ್ಯ ಆಚರಣೆಗಳ ವಿಷಯದಲ್ಲಿ ಶರಣರ ಪ್ರತಿರೋಧ ಕಂಡುಬಂದರೂ, ಯೋಗ–ತಂತ್ರಗಳ ಮೂಲತಾತ್ವಿಕತೆಗೆ ಅನೇಕ ಶರಣರ ಸಹಮತ ಕಾಣಿಸುತ್ತದೆ. ಲಿಂಗಾಯತ ಧರ್ಮವು ಸಂಘಟಿತ ಸ್ವರೂಪದಲ್ಲಿ ಕಾಣಿಸಿಕೊಳ್ಳುವುದಕ್ಕೂ ಮುನ್ನ ಶೈವಸಿದ್ಧರಾಗಿದ್ದ ಅನೇಕ ಸಾಧಕರು ನಂತರವೂ ತಮ್ಮ ಮೂಲವನ್ನು ಕಾಪಾಡಿಕೊಂಡಿದ್ದರ ಸೂಚನೆಯಿದು. ಅಲ್ಲಮಪ್ರಭು, ರೇವಣಸಿದ್ಧ, ಸಿದ್ಧರಾಮ, ಮರುಳಸಿದ್ಧ, ಕಪಿಲಸಿದ್ಧ ಇವರುಗಳ ಹೆಸರಿನ ಜೊತೆ ಬೆಸೆದುಕೊಂಡ ಸಿದ್ಧ ಪದ ಇವರೆಲ್ಲರ ಸಾಧನಾ ಮುಖವನ್ನೇ ಸೂಚಿಸುತ್ತದೆ. ಅಲ್ಲಮನ ವಚನಗಳಲ್ಲಂತೂ ಯೌಗಿಕ ಪರಿಭಾಷೆ, ತಾಂತ್ರಿಕ ಪದಗಳು ಹೇರಳವಾಗಿ ದೊರೆಯುತ್ತವೆ. ಚಕ್ರಗಳು, ಸೂಕ್ಷ್ಮನಾಳಗಳು, ಬೀಜಾಕ್ಷರಗಳು, ಅದಕ್ಕೆ ಅಧಿದೇವತೆಗಳು... ಹೀಗೆ ತಾಂತ್ರಿಕಾನುಭವದ ಅಭಿವ್ಯಕ್ತಿ ಅವನ ವಚನಗಳಲ್ಲಿ ಹೇರಳವಾಗಿ ಕಾಣಸಿಗುತ್ತದೆ.

**ಆಧಾರಲಿಂಗ ಕುಂಡಲಿವಿಡಿದು; ಹೃದಯಕಮಲದಲಿ ಬ್ರಹ್ಮ**
**ನಾಳದಲಿ ವಿಷ್ಣು, ನಾಳಾಗ್ರದಲ್ಲಿ ರುದ್ರ,**
**ಭ್ರೂಮಧ್ಯದ ಮೇಲೆ ಈಶ್ವರನು, ಬ್ರಹ್ಮರಂಧ್ರದ ಮೇಲೆ ಸದಾಶಿವನು.**
**ಶಿಖರಾಗ್ರದಲ್ಲಿ ಸರ್ವಗತ ಶಿವನು.**
**ಆದಿ ಅನಾದಿಯಿಲ್ಲದಂದು ಗುಹೇಶ್ವರಲಿಂಗ ನಿರಾಳನು.**

**ಆಧಾರ ಸ್ವಾಧಿಷ್ಠಾನ ಮಣಿಪೂರಕಸ್ಥಾನವನರಿಯರು**
**ಅಷ್ಟದಳಕಮಲದಲ್ಲಿ ಸೂಕ್ಷ್ಮನಾಳವೈದುವದೆ?**
**ಇನ್ನೇನನರಿದರಾರೊ? ಬೇರೆ ಮತ್ತೆ ಅರಿಯಲುಂಟೆ ಹೇಳಾ?**
**ಸಹಸ್ರದಳಕಮಲದ ಬ್ರಹ್ಮರಂಧ್ರದಲ್ಲಿಪ್ಪ**
**ಅಮೃತಸ್ವರವನರಿದು, ಹಿಡಿದುಕೊಂಬುದು, ಅರಿದು! ಗುಹೇಶ್ವರಾ.**

ಇಂತಹ ವಚನಗಳೆಡೆ ಲಕ್ಷ್ಯಹರಿಸಿದಾಗ ಅಲ್ಲಮನ ಸಾಧಕ ಮುಖ ಪರಿಚಯವಾಗುತ್ತದೆ. ಯೌಗಿಕ ಅನುಭೂತಿಯನ್ನು 'ಸಂದಾಭಾಷೆ'ಯಲ್ಲಿ ಕಟ್ಟಿಕೊಡುವ ರಹಸ್ಯ ಸಾಧನಾಪಂಥಗಳ ಅಭಿವ್ಯಕ್ತಿಕ್ರಮ ಅಲ್ಲಮನ ವಚನಗಳ ಮೂಲಸ್ರೋತವಾಗಿದೆ. ಯೋಗಿನಿಯಾದ ಅಕ್ಕಮಹಾದೇವಿಯ ವಚನಗಳಲ್ಲೂ ಇಂಥ ಪರಿಭಾಷೆ ಸಾಮಾನ್ಯವಾಗಿದೆ. ಅವಳು ಸೂಚಿಸುವ 'ಕದಳಿ' ಸೂಚ್ಯವಾಗಿ ಗುಹ್ಯಸಾಧನೆಯೆಡೆಗೆ ಬೆರಳು ಮಾಡುತ್ತದೆ. ಕರ್ನಾಟಕದ ಸಾಂಸ್ಕೃತಿಕ ಭಾಗವೇ ಆಗಿರುವ ಶ್ರೀಶೈಲವು ಆಕೆಯ ಸಾಧನಾ ಸ್ಥಳ. ಆಕೆ ಐಕ್ಯಗೊಂಡ ಸ್ಥಳವೂ ಹೌದು. ಶ್ರೀಸೈಲವು ತಾಂತ್ರಿಕ ಸಾಧನಾಪಂಥಗಳ ಕೇಂದ್ರಸ್ಥಾನವಾಗಿತ್ತು ಎಂಬ ಕುರಿತು ಅನೇಕ ಆಧಾರಗಳು ದೊರೆಯುತ್ತವೆ. ಅದು ಕಾಪಾಲಿಕರ ಕೇಂದ್ರವಾಗಿತ್ತೆಂದು ಭವಭೂತಿಯು ತನ್ನ 'ಮಾಲತೀಮಾಧವ' ಕೃತಿಯಲ್ಲಿ ಹೇಳುತ್ತಾನೆ. ಹಲವು ಬೌದ್ಧ ತಾಂತ್ರಿಕ ಗ್ರಂಥಗಳಲ್ಲಿಯೂ ಶ್ರೀಶೈಲವನ್ನು ಕೇಂದ್ರಸ್ಥಾನವೆಂದು ಬಣ್ಣಿಸಲಾಗಿದೆ.

ವಚನಕಾರರ ತರುವಾಯ ಸೃಷ್ಟಿಯಾದ ಸ್ವರವಚನಗಳು, ತತ್ವಪದಗಳಲ್ಲಿ ಯೌಗಿಕಾನುಭೂತಿಯ ಹೊಳಹು ಕಾಣುತ್ತದೆ. ಅಂತೆಯೇ ಮಧ್ಯಕಾಲೀನ ಭಕ್ತಚಳುವಳಿಯ ಅಂಗವಾದ ಹರಿದಾಸ ಸಾಹಿತ್ಯದಲ್ಲಿಯೂ ಇಂತಹ ಅನುಭೂತಿಯಿದೆ. ಭಕ್ತಿಚಳುವಳಿಯ ಜಾತ್ಯತೀತ ನಿಲುವು, ಸರಳತೆಗಳ ಹಿಂದೆ ಅವಧೂತಪಂಥಗಳ ಪ್ರೇರಣೆಯಿದೆ. ಸ್ವಸಾಧನೆಯ ಜೊತೆಗೆ ಲೋಕಹಿತವನ್ನು ಹಂಬಲಿಸುವ ಜೀವಪರ, ಜೀವನಪ್ರೇಮದ ಸಾಕಾರರೂಪವಾದ ಸಂತಪರಂಪರೆ ಅವಧೂತ ಪರಂಪರೆಗಳ ಉದಾರತೆಯನ್ನು

ಹೀರಿಕೊಂಡು ಬೆಳೆದಿದೆ. ಮಹಾರಾಷ್ಟ್ರದ ಸಂತಪರಂಪರೆಯಲ್ಲಿ ಗೋರಖವಾಣಿಯು ಕೇಳುವಂತೆ, ಕನ್ನಡದ ಸಂತಪರಂಪರೆಯಲ್ಲೂ ಅದು ಧ್ವನಿಸಿದೆ. ಹದಿನೇಳನೆಯ ಶತಮಾನದಲ್ಲಿ ಆಗಿಹೋದ ಸರ್ವಜ್ಞನ ವಚನಗಳಲ್ಲೂ ಯೌಗಿಕ ಸಂಜ್ಞೆಯಿದೆ. ಜೈನಕವಿ ರತ್ನಾಕರನ ಯೋಗ–ಭೋಗದ ಸಮನ್ವಯದ ನಿಲುವಿನಲ್ಲಿಯೂ 'ಅವಧೂತ' ತತ್ವದ ವೈರುಧ್ಯಗಳನ್ನೂ ಜೀರ್ಣಿಸಿಕೊಂಡು ಸಮರಸಗೊಳ್ಳುವ ಧೀರನಿಲುವೇ ಕಾಣಿಸುತ್ತದೆ. ಭಜನಾಪದಗಳೆಂದು ಸಾಹಿತ್ಯ ಚರಿತ್ರಕಾರರ ಕಣ್ಣಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ತತ್ವಪದಕಾರರ ರಚನೆಗಳಲ್ಲಿ ಯೋಗ–ತಾಂತ್ರಿಕ ಪರಿಭಾಷೆ ಸಶಕ್ತವಾಗಿ ಅಭಿವ್ಯಕ್ತಿಗೊಳಿಸಲ್ಪಟ್ಟಿದೆ. ಇವರೆಲ್ಲ ಸಾಧಕರಾಗಿದ್ದರು ಎಂಬುದಕ್ಕೆ ಅವರ ಗೀತೆಗಳೇ ಸಾಕ್ಷಿಯಾಗುತ್ತವೆ. ನಿಜಗುಣ ಶಿವಯೋಗಿ, ಶಿಶುನಾಳ ಷರೀಫ ಮುಂತಾದವರ ರಚನೆಗಳು ಅವಧೂತ ಪರಂಪರೆಯ ಮುಂದುವರಿಕೆಯನ್ನೇ ಸೂಚಿಸುತ್ತವೆ.

ದತ್ತ ಪರಂಪರೆಯ ಯೋಗಿಗಳು ಹಾಗೂ ಆರೂಢ ಪರಂಪರೆಯ ಸಿದ್ಧರೂ ಅವಧೂತ ಪರಂಪರೆಯ ವಾರಸುದಾರರೇ ಆಗಿದ್ದಾರೆ. ಭಕ್ತಿಪಂಥದ ಪ್ರಭಾವದಿಂದ ಶೈವ ಸಾಧನಾಪಂಥಗಳ ವೈಷ್ಣವೀಕರಣ ನಡೆಯಿತು. ಕಾಲಕ್ರಮೇಣ ಶಾಕ್ತಸಿದ್ಧ ದತ್ತಾತ್ರೇಯನು ವಿಷ್ಣುವಿನ ಸ್ವರೂಪ ಪಡೆದುಕೊಂಡ. ನಾಥ ಹಾಗೂ ಲಿಂಗಾಯತ ಪಂಥಗಳ ಪ್ರೇರಣೆಯಿಂದ ಆರೂಢಪಂಥಧ ಯೋಗಿಗಳು ಕಾಣಿಸಿಕೊಂಡರು. ವಿಭಿನ್ನ ದಾರ್ಶನಿಕ ಧಾರೆಗಳಿಗೆ ಸೇರಿದ ಸಾಧಕರು ಯೋಗ–ತಂತ್ರಗಳ ಬೇರಿನಿಂದಲೇ ಚಿಗಿತು ವಿವಿಧ ದಿಕ್ಕಿನಲ್ಲಿ ರೆಂಬೆಕೊಂಬೆಗಳನ್ನು ಚಾಚಿ ಬೆಳೆದರು. ಗುರುಪರಂಪರೆಯು ಇವರ ಸಾಧನಾ ಪದ್ಧತಿಯ ಮೂಲ ನೆಲೆಗಟ್ಟಾಗಿದೆ. ಮಹಾರಾಷ್ಟ್ರದಲ್ಲಿ ವ್ಯಾಪಕವಾಗಿದ್ದ ದತ್ತ ಪರಂಪರೆ 'ಅವಧೂತ ಸಂಪ್ರದಾಯ' ಎಂದೇ ಗುರುತಿಸಲ್ಪಡುತ್ತದೆ. ಕರ್ನಾಟಕದಲ್ಲಿಯೂ ಪಂತ ಮಹಾರಾಜ ಬಾಳೇಕುಂದ್ರಿಕರ, ವಾಸಿಷ್ಠಗಣಪತಿ ಮುನಿ, ಶ್ರೀಧರಸ್ವಾಮಿ ಮೊದಲಾದ ಯೋಗಿಗಳು ತಮ್ಮ ಸಾಧನೆ, ಪವಾಡಗಳ ಜೊತೆಗೆ ಜನಪ್ರೀತಿಯನ್ನೂ ಗಳಿಸಿದ ಸಂತರಾಗಿ ಬದುಕಿ ಬಾಳಿದರು.

ಆರೂಢ ಸಿದ್ಧರ ಪರಂಪರೆಯೂ ಅವಧೂತ ಪರಂಪರೆ ಎನಿಸಿಕೊಂಡಿದೆ. ಧರ್ಮಕಲ್ಯಾಣವನ್ನು ಸ್ಥಾಪಿಸಿದ ಗುಂಡಬಸವಣ್ಣನು ಆರೂಢ ಮಾದರಿಯ ಸಂತನಾಗಿದ್ದಾನೆ. ಶ್ರೀಶೈಲದೊಂದಿಗಿನ ನಂಟು ಅವನನ್ನು ಯೋಗ–ತಂತ್ರ ಪರಂಪರೆಯೊಂದಿಗೆ ಸಮೀಕರಿಸುತ್ತದೆ. ಆತನ 'ಡಂಗೂರ ಪದಗಳು' ಕಾಲಜ್ಞಾನವನ್ನು ಸಾರುತ್ತವೆ. ಸಾಧನೆಯ ಒಂದು ಹಂತದಲ್ಲಿ ಅಂತಃಸ್ಫುರಣೆಯಿಂದ ತ್ರಿಕಾಲಜ್ಞಾನಿಯಾಗಿ ಭವಿಷ್ಯವಾಣಿ ನುಡಿಯುವ ಕಾಲಜ್ಞಾನವು ಅಧ್ಯಯನದ ದೃಷ್ಟಿಯಿಂದ ಕುತೂಹಲಕರವಾಗಿದೆ. ಸ್ವರವಚನಗಳಲ್ಲಿ ಗುಂಡಬಸವನನ್ನು 'ಸಿದ್ಧ', 'ಶಿವಯೋಗಿ', ಎಂದು ಕರೆದಿದ್ದಾರೆ. ದಿಗ್ಗಿ ಸಂಗಮನಾಥ ಕೂಡ ಆರೂಢ ಸಿದ್ಧನಾಗಿದ್ದು, ಈತನ ಶಿಷ್ಯ ಕೊಡೇಕಲ್ ಬಸವಣ್ಣ, ಮಂಟೇಸ್ವಾಮಿ, ಈ ಪರಂಪರೆಯ

ಮುಂದುವರಿಕೆಯಾಗಿ ಕಾಣುತ್ತಾರೆ. ಕೊಡೇಕಲ್ ಬಸವಣ್ಣನ ಕಾಲಜ್ಞಾನ ಸಾಹಿತ್ಯ ಹಾಗೂ ಆ ಪರಂಪರೆಯ ಸಾಧನಾ ಮುಖವನ್ನು ಗಮನಿಸಿದಾಗ ಯೋಗ–ತಂತ್ರಗಳ ಮೂಲಧಾರೆಯು ಗೋಚರಿಸುತ್ತದೆ. "ನಾಥಪಂಥದಿಂದ ಪ್ರಭಾವಿತನಾದ ಕೊಡೇಕಲ್ಲ ಬಸವ ಆ ಪಂಥದ ಪರಮ ಲಕ್ಷ್ಯವಾದ ಕಾಯದ ಅಮರತ್ವವನ್ನು ಶಿವಯೋಗದೊಂದಿಗೆ ಸಮೀಕರಿಸಿದ್ದಾನೆ". (ಕೊಡೇಕಲ್ ವಚನವಾಣಿ, ಬಸವಲಿಂಗ ಸೊಪ್ಪಿಮಠ, ಪು.೧೪೦) ಶರಣ ಚಳುವಳಿಯ ಸಾಮೂಹಿಕ ನೆಲೆ ಹಾಗೂ ಆರೂಢಪಂಥದ ಆಚರಣೆಗಳು ಬೆರೆತ ಮಾರ್ಗವಿದು.

**ಉಪಸಂಹಾರ**

ಅಜ್ಞಾತವಾಗಿರಲು ಬಯಸಿದ ಅವಧೂತರು ತಮ್ಮ ಚರಿತ್ರೆಯ ಹೆಜ್ಜೆಗಳನ್ನು ಮೂಡಿಸಲಿಲ್ಲ. ಹೆಜ್ಜೆಮೂಡದ ಹಾದಿಯನ್ನು ಹುಡುಕುವ ಕೆಲಸ ಇಂದಿನ ಸಂಸ್ಕೃತಿಶೋಧದ ಮುಂದಿರುವ ಬಹುದೊಡ್ಡ ಸವಾಲು. ಸಾಹಿತ್ಯವು ಈ ಶೋಧಕ್ಕೆ ಒದಗಬಹುದಾದ ಒಂದು ಆಕರವಷ್ಟೆ. ವಚನಸಾಹಿತ್ಯ, ಕೆಲಮಟ್ಟಿಗೆ ದಾಸಸಾಹಿತ್ಯ, ಮುಖ್ಯವಾಗಿ ತತ್ವಪದಗಳಲ್ಲಿ ಹರಡಿದ ಸಾಧನಾ ಪರಿಭಾಷೆ ಈ ಪರಂಪರೆಯ ಮೇಲೆ ಬೆಳಕು ಚೆಲ್ಲಬಲ್ಲದು. ಜನಪದ ಸಾಹಿತ್ಯದಲ್ಲಿ ಮೂಡಿದ ಕಾವ್ಯ, ಪುರಾಣ, ಕಥನಗಳು ಇವುಗಳ ಗುಟ್ಟನ್ನು ಬಿಚ್ಚಿಡಬಲ್ಲವು. ಅಂತೆಯೇ ಸ್ಥಳೀಯ ಇತಿಹಾಸವು ಹೆಚ್ಚುಹೆಚ್ಚು ರೂಪುಗೊಳ್ಳುತ್ತ ಹೋದಂತೆ ಅವಧೂತ ಪರಂಪರೆಗಳ ಚಹರೆ ಸ್ಪಷ್ಟಗೊಳ್ಳುತ್ತ ಹೋದೀತು. ದೇಸೀಯ ಚಿಂತನೆಗಳ ಸತ್ವದಿಂದ' ಅರಳಿದ ಈ ಪರಂಪರೆಯು ದೇಸೀಯ ಚಿಂತನೆಗಳ ನಾಡಿಮಿಡಿತವನ್ನು ಅರಿತಾಗಲೇ ಅರಿವಾಗಬಲ್ಲದು. ಈ ಪರಂಪರೆಯು ಕಟ್ಟಿದ ಜ್ಞಾನಮಾದರಿಗಳನ್ನು ಅರಿಯಲು ಅಂತರ್ ಶಿಸ್ತೀಯ ಅಧ್ಯಯನ ಕ್ರಮಗಳ ಮೊರೆಹೋಗಬೇಕಾದುದು ಅನಿವಾರ್ಯ. ಅಥವಾ ನಮ್ಮ ಆಧುನಿಕ ಜ್ಞಾನಮೀಮಾಂಸೆಯ ಚೌಕಟ್ಟುಗಳನ್ನು ಹಿಗ್ಗಿಸಿಕೊಂಡಾಗಲೇ ಈ ಶೋಧದ ನೆಲೆಗಳು ನಮಗೆ ನಿಲುಕಬಹುದು

**ಪರಾಮರ್ಶನ ಗ್ರಂಥಗಳು**

**೧. ಆಕರ ಗ್ರಂಥಗಳು**

1. ಕಡವ ಶಂಭುಶರ್ಮ– ನಾಥಪಂಥದ ಅನುವಾದಿತ ಕೃತಿಗಳು, ಕಡವ ಶಂಭುಶರ್ಮ ಸ್ಮಾರಕ ಪ್ರತಿಷ್ಠಾನ, ಪುತ್ತೂರು, ೨೦೦೫
2. ಕೃಷ್ಣಮೂರ್ತಿ.ಮ. ಸು. – ಸಿದ್ಧಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦
3. ಗೀತಾ ವಸಂತ– ಬೇಂದ್ರೆಕಾವ್ಯ: ಅವಧೂತಪ್ರಜ್ಞೆ, ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ, ೨೦೧೦

4. ಗೋಡೀಹಾಳ ಕಾಂತೇಶರೆಡ್ಡಿ. ಆರ್– ಧರ್ಮಕಲ್ಯಾಣ: ಸಾಂಸ್ಕೃತಿಕ ಅಧ್ಯಯನ, ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠ, ಸೊಂಡೂರು, ೨೦೧೧
5. ಢೇರೆ ರಾಮಚಂದ್ರ ಚಿಂತಾಮಣಿ– (ಅನು) ಚಂದ್ರಕಾಂತ ಪೋಕಳೆ, ನಾಥಸಂಪ್ರದಾಯದ ಇತಿಹಾಸ, ಸಿದ್ಧ ಸಂಸ್ಥಾನ ಮಠ ಚಿಂಚಣಿ, ೨೦೦೪
6. ಢೇರೆ ರಾಮಚಂದ್ರ ಚಿಂತಾಮಣಿ– (ಅನು) ಚಂದ್ರಕಾಂತ ಪೋಕಳೆ, ದತ್ತಸಂಪ್ರದಾಯದ ಇತಿಹಾಸ, ಸಿದ್ಧ ಸಂಸ್ಥಾನ ಮಠ ಚಿಂಚಣಿ, ೨೦೦೯
7. ನಾಗರಾಜ ಡಿ. ಆರ್.– ಅಲ್ಲಮಪ್ರಭು ಮತ್ತು ಶೈವಪ್ರತಿಭೆ, ಅಕ್ಷರ ಪ್ರಕಾಶನ ಹೆಗ್ಗೋಡು, ೨೦೦೬
8. ಮಲ್ಲೇಪುರಂ.ಜಿ. ವೆಂಕಟೇಶ– ಅರಿವಿನ ಕಥನ, ಸಿವಿಜಿ ಪ್ರಕಾಶನ, ಬೆಂಗಳೂರು, ೨೦೦೨
9. ರಹಮತ್ ತರೀಕೆರೆ– ಕರ್ನಾಟಕದ ನಾಥಪಂಥ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬
10. ಸತ್ಯಕಾಮ– ತಂತ್ರಯೋನಿ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೦೫
11. ಸೊಪ್ಪಿಮಠ ಬಸವಲಿಂಗ (ಸಂ)– ಕೊಡೇಕಲ್ ವಚನವಾಕ್ಯ ಸಂಪುಟ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೮